## ನಾಭಿಯಿಂದ

ಕಳೆದ ಭಾನುವಾರ ನನ್ನ ಸಣ್ಣ ಮಗ ಅಕ್ಷಯನಿಗೆ ಸಂಗೀತ ಸ್ಪರ್ಧೆ ಇತ್ತು. ಕೊನೇ ಗಳಿಗೆಯಲ್ಲಿ ತಯಾರಿ ನಡೆಸುವುದು ಅವನ ಜಾಯಮಾನ. ಸ್ಪರ್ಧೆಯ ಹಿಂದಿನ ದಿನ ಅವನ ಸಂಗೀತಾಭ್ಯಾಸ ಶುರುವಾಯ್ತು. ಅಲ್ಲೇ ಕುಳಿತು ಕೇಳಿಸಿಕೊಳ್ಳುತ್ತಿದ್ದ ಅವನಪ್ಪನಿಗೆ ಏನೊ ಸರಿ ಇಲ್ಲ ಅನಿಸಿರಬೇಕು, ‘ನೀನು ಗಂಟಲಿನಿಂದ ಹಾಡುತ್ತಿದ್ದೀಯ ಪುಟ್ಟಾ, ಸಂಗೀತ ನಾಭಿ... ನಾಭಿಯಿಂದ ಹೊರಹೊಮ್ಮಬೇಕು’ ಎಂದರು. ಅವರ ಮಾತು ಮುಗಿಯುತ್ತಿದ್ದಂತೆ ಏನಾಗಿತ್ತೊ ಏನೊ, ಅಕ್ಷಯ ವಾಂತಿ ಮಾಡಿಕೊಂಡ. ಅಲ್ಲೇ ಇದ್ದ ನನ್ನ ದೊಡ್ಡ ಮಗ ‘ವ್ಹಾ... ಅಪ್ಪಾ, ನಿಮ್ಮ ಮಗ ನೀವು ಹೇಳಿದ್ದನ್ನು ಎಷ್ಟು ಚೆನ್ನಾಗಿ ಪಾಲಿಸಿದ ನೋಡಿ, ನಾಭಿಯಿಂದಲೇ ಹೊರಹೊಮ್ಮಿತಲ್ಲ...’ ಎಂದಾಗ ವಾಂತಿ ಮಾಡಿ ಸುಸ್ತಾಗಿದ್ದ ಅಕ್ಷಯನೂ ಸೇರಿ ಎಲ್ಲರೂ ನಕ್ಕಿದ್ದೇ ನಕ್ಕಿದ್ದು.



**ಮಂಜುಳಾ ಶಾಸ್ತ್ರಿ**

## ಫೋಟೊ ತೆಗೆಯುವಾಗಲೇ

ಮನೆಯಲ್ಲಿ ಪತ್ರಿಕೆ ಓದುತ್ತಾ ಕುಳಿತಿದ್ದೆ. ಪತ್ರಿಕೆಯಲ್ಲಿ ಬಾಂಬ್ ಸ್ಫೋಟವಾದ ಸುದ್ದಿ ಮತ್ತು ಅದರ ಚಿತ್ರದೊಂದಿಗೆ ಬಾಂಬ್ ಸ್ಫೋಟಕ್ಕೆ ಕಾರಣರೆನ್ನಲಾದ ವ್ಯಕ್ತಿಯ ಫೋಟೊಗಳನ್ನೂ ಪ್ರಕಟಿಸಿದ್ದರು. ಅಣ್ಣನ ಮಗಳು ಸ್ನೇಹಾ ನನ್ನ ಪಕ್ಕ ಬಂದು ಕುಳಿತಳು. ಪತ್ರಿಕೆಯಲ್ಲಿನ ಫೋಟೊದ ಬಗ್ಗೆ ವಿವರ ಕೇಳಿದಳು. ನಾನು ಬಾಂಬ್ ಸ್ಫೋಟ ಹಾಗೂ ಅದರ ಸ್ವರೂಪ, ಹಾನಿ, ಕೃತ್ಯವೆಸಗಿದವರ ಬಗ್ಗೆ ವಿವರಿಸಿದೆ. ‘ಹಾಗಿದ್ರೆ ಈ ಕೆಲಸ ಇವರು ಮಾಡಿದ್ದಾರಾ?’ ಎಂದಳು. ಹೌದೆಂದೆ. ‘ಈಗ ಇವರು ಎಲ್ಲಿದ್ದಾರೆ?’ ಮುಗ್ಧಳಾಗಿ ಕೇಳಿದಳು. ‘ಪೊಲೀಸರು ಇವರನ್ನು ಹಿಡಿಯಲು ಹುಡುಕಾಟ ನಡೆಸಿದ್ದಾರೆ’ ಎಂದೆ. ‘ಇವರ ಫೋಟೊ ತೆಗೆಯುವಾಗಲೇ ಹಿಡಿಯಬಹುದಾಗಿತ್ತಲ್ಲ’ ಎಂದು ಅದೇ ಮುಗ್ಧತೆಯಿಂದ ಪ್ರಶ್ನಿಸಿದಳು. ಅವಳ ಮಾತಿಗೆ ಏನು ಉತ್ತರಿಸಬೇಕೋ ತಿಳಿಯಲಿಲ್ಲ.

**ಭೋಜರಾಜ ಸೊಪ್ಪಿಮಠ**

